ಮಾಡಲಾಗಿದೆ. ಪ್ರತ್ಯೇಕ ರೈತರ ಮಂಟ್ಪದಲ್ಲಿ ಸರಾಸರಿ ಇಳುವರಿಯ ಆಧಾರಭೂತ ಅಂಕಿಅಂಶಗಳನ್ನು ಪಡೆಯಲು ಹೆಚ್ಚಿನ ಜನಶಕ್ತಿ ಮತ್ತು ಖರ್ಚು ಆಗುತ್ತದೆ. ಇದರಿಂದ ರೈತರು ಹೆಚ್ಚಿನ ವಿಮಾ ಕಂತನ್ನು ಕೊಡಬೇಕಾಗುತ್ತದೆ. ಆದುದರಿಂದ ವಿಮಾ ಕಂತನ್ನು ಕೆಳಗಿನ ಮಟ್ಟದಲ್ಲಿಡಲು ಬೆಳೆ ವಿಮಾ ಯೋಜನೆಯನ್ನು ತಾಲ್ಲೂಕುಮಟ್ಟದಲ್ಲಿ, ಸಮೂಹ ವಿಮೆಯನ್ನಾಗಿ ಜಾರಿಗೊಳಿಸಲಾಗಿದೆ. ದೀರ್ಘಾವಧಿಯಲ್ಲಿ ಸಾಕಷ್ಟು ಸರಾಸರಿ ಇಳುವರಿಯ ಅಂಕಿ ಅಂಶಗಳನ್ನು ಒದಗಿಸಿದರೆ, ಈಯೋಜನೆಯನ್ನು ಹೋಬಳಿ, ಹಳ್ಳಿಯ ಅಥವಾ ವೈಯಕ್ತಿಕ ಮಟ್ಟದಲ್ಲಿ ಕೊಡಲು ಸಾಧ್ಯವಾಗಬಹುದು.

ಈ ಯೋಜನೆ ರೈತರಿಗೆ ಲಾಭದಾಯಕವಾಗಿದೆ. ೧೯೮೫ರ ಮುಂಗಾರು ಹಂಗಾಮಿನಲ್ಲಿ ೩.೦೩ ಕೋಟಿ ರೂಪಾಯಿಂಗಳನ್ನು ನಷ್ಟ ಪರಿಹಾರದ ರೂಪದಲ್ಲಿ ವಿಮೆ ಮಾಡಿಸಿರುವ ರೈತರುಗಳಿಗೆ ನೀಡಲಾಗಿದೆ.

6. ಡಾ॥ ಅಂಬೇಡ್ಕರ ಬಾಲಕಿಯರ ವಸತಿ ವಿದ್ಯಾಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಎಲ್ಲಾ ತರಗತಿಗಳಿಗೂ ಅನ್ವಯಿಸುವುದು

ಶ್ರೀ ಬಿ ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ಸರ್ಕಾರಿ ಹುಕುಂ ನಂ ಇ.ಡಿ. ೨೮೮ ಎಂ. ಹೆಚ್. ಎಸ್. ೮೫, ತಾರೀಖು. ೧೫-೫-೮೬ರ ಪ್ರಕಾರ, ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿವಿದ್ಯಾಶಾಲೆಯ ನಿಯಮಾವಳಿಗಳ ಮಾದರಿಯಲ್ಲಿ ಕನ್ನಡದ ಜೊತೆಗೆ ಇಂಗ್ಲೀಷ್ ಮಾಧ್ಯಮವನ್ನು ಬಳಸಲು ಡಾ॥ ಬಿ. ಆರ್. ಅಂಬೇಡ್ಕರ್ ಪರಿಶಿಷ್ಟಜಾತಿ ವರ್ಗ ಪ್ರತಿಷ್ಠಾನ್ವಿತ ಬಾಲಕಿಯರ ವಸತಿ ವಿದ್ಯಾಶಾಲೆಯನ್ನು ಮಂಜೂರ್ಮಾಡಲಾಗಿದೆ. ಕಿತ್ತೂರು ರಾಣಿ ಚನ್ನಮ್ಮ ಸ್ಕೂಲು ಮಾದರಿಯಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಬಾಲಕಿಯರ ವಸತಿ ವಿದ್ಯಾಶಾಲೆಗೂ, ಇಂಗ್ಲಿಷ್ ಮಾಧ್ಯಮವನ್ನು ಎಲ್ಲಾ ತರಗತಿಗೂ ಅನ್ವಯಿಸುವಂತೆ ಸರ್ಕಾರದವರು ೧೯೮೭-೮೮ ರಿಂದ ಜಾರಿಗೆ ಕೊಡಲು ಹುಕುಂ ಮಾಡುವರೇ?

ಶ್ರೀ ಡಿ ಮಂಜುನಾಥ್ (ಶಿಕ್ಷಣ ಸಚಿವರು).—ಸ್ವಾಮಿ, ಈಗ ಇಂಗ್ಲೀಷ್ ಮಾಧ್ಯಮವನ್ನು ಜಾರಿಗೆ ತರುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಇದಕ್ಕೆ ಕ್ಯಾಬಿನೆಟ್, ಸಮಿತಿಯನ್ನು, ನೇಮಕ ಮಾಡಿದೆ. ಇಷ್ಟರಲ್ಲೇ ಸಮಿತಿ ಸೇರುತ್ತದೆ. ಸೇರಿ ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆ,

ಅಧ್ಯಕ್ಷರು —ಶ್ರೀ ಶಿವಲಿಂಗೇಗೌಡ, ಆಬ್ಸೆಂಟ್

ಶ್ರೀ ರಾಮಕೃಷ್ಣ ಆಬ್ಸೆಂಟ್

7 ೧೯೮೬-೮೭ನೇ ಸಾಲಿನಲ್ಲಿ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾದ ಗ್ರಾಮಗಳಿಗೆ ಸರ್ಕಾರದಿಂದ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ೧೯೮೬-೮೭ನೇ ಸಾಲಿನಲ್ಲಿ ಬರಗಾಲಕ್ಕೆ ತುತ್ತಾದ ಗ್ರಾಮಗಳೆಷ್ಟು ಮತ್ತು ಈವರೆಗೆ ಬರಗಾಲ ಕಾಮಗಾರಿಗಾಗಿ ಖರ್ಚು ಮಾಡಿರುವ ಹಣವೆಷ್ಟು ಎಂಬ ವಿವರದ ಬಗ್ಗೆ ಮತ್ತು ಕೂಲಿ ಸಿಗದೆ, ಅಲೆಯುತ್ತಿರುವ ಕೂಲಿ ಕಾರ್ಮಿಕರಿಗೆ ಸರ್ಕಾರ ಕೂಲಿಗಾಗಿ ಏನು ವ್ಯವಸ್ಥೆ ಮಾಡಿದೆ ಎಂಬ ಸಾರ್ವಜನಿಕ ಮಹತ್ವವಾದ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಕಂದಾಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ವರ್ಷಗಳಿಂದ ಇದ್ದ ತೀವ್ರ ಬರಗಾಲ ಪರಿಸ್ಥಿತಿಯು ೧೯೮೬-೮೭ರ ಬೇಸಿಗೆಯ ತಿಂಗಳುಗಳಾದ ಏಪ್ರಿಲ್ ಮೇ ಮತ್ತು ಜೂನ್ ತಿಂಗಳವರೆಗೆ ಮುಂದುವರಿದುಕೊಂಡು ಬಂದಿತ್ತು ೧೯೮೭ರ ಜೂನ್, ಜುಲೈ ತಿಂಗಳಿಂದ ಆರಂಭವಾಗುವ ಮುಂಗಾರು ಮಳೆಯಿಂದ, ಕೃಷಿ ವರ್ಷದಲ್ಲಿ ರಾಜ್ಯದ ಬಹುತೇಕ ಕಡೆ ಒಳ್ಳೆಯ ಮಳೆಯಾಗಿದ್ದು ಕೆಲವೇ ಭಾಗಗಳಲ್ಲಿ ಅಲ್ಲಲ್ಲಿ ಸಾಕಷ್ಟು ಮಳೆಯಾಗದೇ ಅಭಾವ ಪರಿಸ್ಥಿತಿಯೂ ಉದ್ಭವಿಸಿತ್ತು.